'ಇವತ್ತೆಷ್ಟು ತಾರೀಖು?'

'ಒಂಬತ್ತು' ಇದು ಕೆಲಸವಿಲ್ಲದೇ ತಮಾಷೆ ನೋಡುತ್ತಿದ್ದವರ ಕೋರಸ್.

'ನಿನ್ನೆಯ ಟಿಕೆಟ್ ಹಿಡ್ಕೊಂಡು ಬಂದು ಪ್ರಾಣ ತಿಂತೀರಲ್ರೀ. ಹೋಗ್ರಿ ಅತ್ಲಾಗೆ.' ಬೈದು ಗಾಡಿ ಹತ್ತಲು ತಿರುಗಿದ.

ನನ್ನವರು ಈಗ ಸಂಪೂರ್ಣ ಶರಣಾಗತರಾಗಿಬಿಟ್ರು. ಸಾರಿನ ಮಂತ್ರಕ್ಕೆ ಜೋತುಬಿದ್ದರು.

'ಸಾರ್ ಸಾರ್, ತಪ್ಪು ಲೆಕ್ಕಾಚಾರವಾಗೋಯ್ತು. ತಂಗೀ ಮದ್ವೆ ಗಲಾಟೇಲಿ ಈ ಗೊಂದಲವಾಗಿಬಿಡ್ತು. ತಪ್ಪು ಖಂಡಿತಾ ನಿಮ್ದಲ್ಲ ನಿಮ್ಮ ಇಲಾಖೇದೂ ಅಲ್ಲ. ಎಲ್ಲಾ ನಂದೇ ಸಾರ್. ಅರ್ಜೆಂಟು ಊರಿಗೆ ಇವತ್ತು ಹೋಗ್ಲೇಬೇಕು. ಜಾಸ್ತಿ ಬೇಡ ಎರಡೇ ಸೀಟು ಸಾರ್. ಹೇಗಾದ್ರೂ ಕೊಡ್ಸೀ ಸಾರ್.'

'ರೀ ಹಾಗೆಲ್ಲಾ ಕೊಡ್ಸೋಕ್ಕೆ ರೈಲು ನಮ್ಮಪ್ಪಂದೇ? ರೂಲ್ಸಿಗೆ ವಿರುದ್ಧವಾಗಿ ಹೋಗೋಹಾಗಿಲ್ಲ.'

'ಸಾರ್, ರೂಲ್ಸಿಗಿಂತ ಮಾನವೀಯತೆ ಮುಖ್ಯ ಅಲ್ವೇ? ಎಲ್ಲಾ ತಿಳಿದೋರು ನೀವು ಸಾರ್. ಕೆಲ್ಸಕ್ಕೆ ಸೇರಿ ಇಪ್ಪತ್ತ್ವರ್ಷ ಆಯ್ತು. ಅದೇ ಗ್ರೇಡು. ನಾಳೆ ಪ್ರೊಮೋಶನ್‌ಗೆ ಇಂಟರ್‌ವ್ಯೂ ಇದೆ. ನಾಳೆ ಹೋಗ್ದಿದ್ರೆ ಇದ್ದಲ್ಲೇ ಉಳೀದುಬಿಡ್ತೀನಿ. ನಾನು ಮಕ್ಕೊಂದಿಗ ಸಾರ್.'

ಉಹೂಂ ಅವನ ಕಲ್ಲು ಹೃದಯ ಕರಗಲೇ ಇಲ್ಲ. ಕೈಮೀರುವ ಮೊದಲು ಪರಿಸ್ಥಿತಿಯನ್ನು ನನ್ನ ಕೈಗೆತ್ತಿಕೊಂಡೆ. 'ಸಾರ್ ನನ್ನ ಇಬ್ಬರು ಮಕ್ಕಳನ್ನು ಚೆನ್ನೈನಲ್ಲಿ ಸ್ನೇಹಿತರ ಮನೇಲಿ ಬಿಟ್ಟಿದ್ದೀವಿ. ದೊಡ್ಡವನಿಗೆ ಹತ್ತು, ಚಿಕ್ಕವನಿಗೆ ಏಳು ವರ್ಷಗಳು. ನಾವೀವತ್ತು ಹೋಗ್ದಿದ್ರೆ ಊಟ ತಿಂಡಿ ಬಿಟ್ಟು ಅಳ್ತಾರೆ' ಎಂದು ಕಣ್ಣೀರ್ಗರೆದೆ. (ಯಾರಿಗೂ ಹೇಳಬೇಡಿ. ನಾಟಕೋತ್ಸವದಲ್ಲಿ ನನಗೆ ಅತ್ಯುತ್ತಮ ಕಂಬನಿ ಪ್ರಶಸ್ತಿ ಬಂದಿತ್ತು!) ಕಲ್ಲು ಕರಗುವ ಸೂಚನೆ ಕಾಣತೊಡಗಿತು.

'ನೋಡ್ರಮ್ಮ. ರೂಲ್ಸು ಅಂದ್ರೆ ರೂಲ್ಸು. ನಾನೇನೂ ಮಾಡುವಂತಿಲ್ಲ. ಬೇಕಿದ್ರೆ ಸೆಕೆಂಡ್ ಕ್ಲಾಸ್ ಟಿಕೆಟ್ ಖರೀದಿಸಿ ಹತ್ತಿ. ಯಾರಾದ್ರು ಕ್ಯಾನ್ಸಲ್ ಮಾಡಿದ್ರೆ ಸೀಟು ಸಿಗ್ಬಹುದು. ಇಲ್ದಿದ್ರೆ ಸ್ಟ್ಯಾಂಡಿಂಗ್ ಸೀಟೇ ಗತಿ' ಎಂದು ನಮ್ಮ ಹಣೇಬರಹ ಓದಿಹೇಳಿದ.

ಅವನನ್ನು ಹಳಿಯುತ್ತಾ ಸಾಮಾನು ಎಳೆಯುತ್ತಾ ಗಾಂಧೀ ಕ್ಲಾಸ್ ಏರಿದೆವು. ನಮ್ಮ ಹಾಗೇ ಹತ್ತೆಂಟು ಅಬ್ಬೇಪಾರಿಗಳು ಮುಖ ಒಣಗಿಸಿಕೊಂಡು ಬಾಗಿಲಬಳಿ ನಿಂತಿದ್ದರು. ಅವರನ್ನು ಸರಿಸಿ ನಾವೂ ನಿಂತೆವು.

'ಎಲ್ಲಾ ನಿನ್ನಿಂದಲೇ ಆಗಿದ್ದು' ನನ್ನವರು ಬುಸುಗುಟ್ಟಿದರು.

'ನಾನೇನ್ರೀ ಮಾಡ್ದೇ?'

'ನೀನು ಟಿಕೆಟ್‌ನ ಸರ್ಯಾಗಿ ನೋಡಿದ್ದಿದ್ದರೆ ಹೀಗಾಗ್ತಿರ್ಲಿಲ್ಲ. ಇವತ್ತು ಎಲ್ರ ಮುಂದೆ ನನ್ನ ಮಾನ ಹರಾಜಾಗಿ ಹೋಯ್ತು.'

'ನಾನೇ ಯಾಕೆ ಟಿಕೆಟ್ ನೋಡ್ಬೇಕು? ನಿಮಗೆ ಓದೋಕ್ಕೆ ಬರೋಲ್ವೇನು? ಅಷ್ಟಕ್ಕೂ ಅದು ಇದ್ದಿದ್ದು ನಿಮ್ಮ ಪರ್ಸಿನಲ್ಲಿ.'

'ಇದ್ರೇನಾಯ್ತು? ನೀನು ನನ್ನ ಪಾಕೆಟನ್ನು ಪಿಕ್ ಮಾಡೋದೇ ಇಲ್ವೇನು?' ಧ್ವನಿ ಎತ್ತರಿಸಿದರು.

'ಶ್ಶ್, ಸುಮ್ನಿರಿ. ನಿಮ್ದೇನು ವ್ಯಾಜ್ಯವಿದ್ರೂ ಅದೆಲ್ಲಾ ಮನೇಲಿ. ಇಲ್ಲಲ್ಲಾ.' ಪಕ್ಕದಲ್ಲಿ ನಿಂತಿದ್ದ ಹಿರಿಯ ಅನುಭವಸ್ಥ ಗೃಹಸ್ಥರೊಬ್ಬರು ತೋರುಬೆರಳನ್ನು ಬಾಯ್ಮುಂದಿಟ್ಟುಕೊಂಡು ಶ್ಯೂಗುಟ್ಟಿದರು.